# ನ್ಯಾಯದಾನದಲ್ಲಿ ವಿಳಂಬ ತಪ್ಪಿಸಿ

ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ದಿನೇ ದಿನೇ ಏರುತ್ತಲೇ ಇದೆ. ಅಧೀನ ನ್ಯಾಯಾಲಯಗಳಿಂದ ವಿವಿಧ ರಾಜ್ಯಗಳ ಹೈಕೋರ್ಟ್‌ಗಳವರೆಗೂ ಇದೇ ಸ್ಥಿತಿ ಇದೆ. ಈ ರಾಶಿ ಕರಗಿಸಲು ನ್ಯಾಯಾಂಗವು ಹಲವು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆಯಾದರೂ ಅದರಿಂದ ನಿರೀಕ್ಷಿತ ಮಟ್ಟದಲ್ಲಿ ಫಲ ದೊರೆತಂತೆ ಕಾಣುವುದಿಲ್ಲ. ನ್ಯಾಯದಾನದಲ್ಲಿ ವಿಳಂಬ ಸಲ್ಲದು. 'ಅತಿಯಾದ ವಿಳಂಬ, ನ್ಯಾಯ ನಿರಾಕರಣೆಗೆ ಸಮ' ಎಂಬ ಮಾತನ್ನು ಕಾನೂನು ಪಂಡಿತರಿಂದ ನ್ಯಾಯಾಧೀಶರವರೆಗೂ ಎಲ್ಲರೂ ಒಪ್ಪುತ್ತಾರೆ. ಆದರೆ ವಿಳಂಬ ತಪ್ಪಿಸಿ, ಬಾಕಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಸಾಧ್ಯವಾಗುತ್ತಿಲ್ಲ.

ಬಾಕಿ ಇರುವ ಪ್ರಕರಣಗಳನ್ನು ತ್ವರಿತ ಗತಿಯಲ್ಲಿ ಇತ್ಯರ್ಥಪಡಿಸುವಂತೆ ಅಧೀನ ನ್ಯಾಯಾಲಯಗಳಿಗೆ ಐದು ವರ್ಷಗಳ ಹಿಂದೆಯೇ ರಾಜ್ಯ ಹೈಕೋರ್ಟ್ ನಿರ್ದೇಶನ ನೀಡಿತ್ತು. ಕಾಲಮಿತಿಯನ್ನೂ ನಿಗದಿಪಡಿಸಿತ್ತು. ಇಷ್ಟಾಗಿಯೂ ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ ಇದೀಗ 12.63 ಲಕ್ಷ ಪ್ರಕರಣಗಳು ಬಾಕಿ ಇವೆ. ಇದರಲ್ಲಿ 5.87 ಲಕ್ಷದಷ್ಟು ಪ್ರಕರಣಗಳು ಕ್ರಿಮಿನಲ್ ಹಿನ್ನೆಲೆಯವು. ಉಳಿದವು ಸಿವಿಲ್ ಸ್ವರೂಪದ ಪ್ರಕರಣಗಳು ಎಂದು ವರದಿಯಾಗಿದೆ. ಸಿವಿಲ್ ಪ್ರಕರಣಗಳು ವ್ಯಕ್ತಿಗಳ ನಡುವೆ ತಗಾದೆಗೆ ಸಂಬಂಧಿಸಿದವು. ಅದರಲ್ಲೂ ಆಸ್ತಿ ವಿವಾದಗಳೇ ಹೆಚ್ಚು ಎನ್ನಬಹುದು. ಇಂಥ ಪ್ರಕರಣಗಳ ವಿಳಂಬದಿಂದ ಸಮಾಜದ ಮೇಲೆ ಅಂಥ ಗಂಭೀರ ಪರಿಣಾಮ ಆಗಲಾರದು. ಆದರೆ ಕ್ರಿಮಿನಲ್ ಪ್ರಕರಣಗಳು ಸಮಾಜದ ಸ್ವಾಸ್ಥ್ಯದ ಮೇಲೆ ಪರಿಣಾಮ ಬೀರಬಲ್ಲವು. ಇಂಥ ಪ್ರಕರಣಗಳು ತ್ವರಿತವಾಗಿ ಇತ್ಯರ್ಥಗೊಳ್ಳಬೇಕಾದುದು ಸಮಾಜದ ಒಟ್ಟಾರೆ ಹಿತದೃಷ್ಟಿಯಿಂದ ಅಪೇಕ್ಷಿತ. ಇತ್ಯರ್ಥದಲ್ಲಿನ ವಿಳಂಬದಿಂದ ಅಪರಾಧ ಕೃತ್ಯಗಳಿಗೆ ಕುಮ್ಮಕ್ಕು ಸಿಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಅದಕ್ಕೆ ಲವಲೇಶದಷ್ಟು ಅವಕಾಶ ದೊರೆತರೂ ಅದರ ಪರಿಣಾಮ ತೀವ್ರವಾಗಿರುತ್ತದೆ.

ಒಂದು ಕಾಲಘಟ್ಟ ಇತ್ತು. ಕೋರ್ಟ್, ಪೊಲೀಸ್ ಠಾಣೆ ನೆರಳೆಂದರೆ ಜನ ಭಯಪಡುತ್ತಿದ್ದರು. ಠಾಣೆ ಮೆಟ್ಟಿಲು ಹತ್ತುವುದು ಮರ್ಯಾದೆಗೆ ತಕ್ಕುದಲ್ಲ ಎಂಬ ಭಾವನೆ ಇತ್ತು. ಸಣ್ಣಪುಟ್ಟ ತಕರಾರುಗಳನ್ನು ಊರಿನ ಮುಖಂಡರ ಸಮ್ಮುಖದಲ್ಲಿ ರಾಜಿ ಪಂಚಾಯಿತಿ ಮೂಲಕ ಬಗೆಹರಿಸಿಕೊಳ್ಳುತ್ತಿದ್ದರು. ಅಂತಹದೊಂದು ವ್ಯವಸ್ಥೆ ಕ್ರಮೇಣ ಮರೆಯಾಗತೊಡಗಿತು. ಪ್ರತೀ ಸಣ್ಣ ವಿಷಯಕ್ಕೂ ನ್ಯಾಯಾಲಯವನ್ನು ಆಶ್ರಯಿಸುವ ಮನೋಭಾವ ಹಾಗೂ ಅಸಹನೆಗಳು ಹೆಚ್ಚತೊಡಗಿದ ಪರಿಣಾಮ ಪ್ರಕರಣಗಳ ಸಂಖ್ಯೆಯಲ್ಲೂ ಹೆಚ್ಚಳ ಉಂಟಾಯಿತು. ಅಂತೆಯೇ ಅಪರಾಧ ಕೃತ್ಯಗಳೂ ಹಲವು ಪಟ್ಟು ಹೆಚ್ಚಿವೆ. ಆದರೆ ವರದಿಯಾಗುವ ಅಪರಾಧ ಪ್ರಕರಣಗಳ ಸಂಖ್ಯೆಗೆ ತಕ್ಕಂತೆ ನ್ಯಾಯಾಲಯಗಳ ಸಂಖ್ಯೆ ಏರಲಿಲ್ಲ. ಕೋರ್ಟ್‌ಗಳ ಮೇಲೆ ಸಹಜವಾಗಿಯೇ ಒತ್ತಡ ಹೆಚ್ಚಿತು. ನ್ಯಾಯದಾನ ಪ್ರಕ್ರಿಯೆಯ ವಿಳಂಬಕ್ಕೆ ಇದೂ ಒಂದು ಕಾರಣವಾಯಿತು. ತನಿಖೆ, ದೋಷಾರೋಪ ಪಟ್ಟಿ ಸಲ್ಲಿಕೆ ಹಾಗೂ ವಿಚಾರಣೆ ಪ್ರಕ್ರಿಯೆ ಈ ಮೂರೂ ನೆಲೆಯಲ್ಲಿ ಸಮನ್ವಯ ಸಾಧ್ಯವಾದರೆ ಹಾಗೂ ವೇಗ ತುಂಬುವ ಕೆಲಸ ಫಲಿಸಿದರೆ ಪ್ರಕರಣಗಳ ತ್ವರಿತ ಇತ್ಯರ್ಥ ಸಾಧ್ಯವಾಗಬಹುದು. ಇದಕ್ಕೆ ಪ್ರಧಾನವಾಗಿ ಪೊಲೀಸರು ಹಾಗೂ ವಕೀಲರ ಸಹಕಾರ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಅವರನ್ನು ಸಂವೇದನಾಶೀಲರನ್ನಾಗಿಸುವುದು ಅಗತ್ಯ.

ಲೋಕ ಅದಾಲತ್ ಮೂಲಕ ಸಿವಿಲ್ ಪ್ರಕರಣಗಳ ಇತ್ಯರ್ಥಕ್ಕೆ ಇನ್ನೂ ಹೆಚ್ಚಿನ ವೇಗ ತುಂಬಬೇಕು. ಫಾಸ್ಟ್ ಟ್ರ್ಯಾಕ್ ಕೋರ್ಟ್‌ಗಳ ಸಂಖ್ಯೆ ಹೆಚ್ಚಿಸಬೇಕು. ನ್ಯಾಯಾಂಗ ವ್ಯವಸ್ಥೆಯ ವಿಕೇಂದ್ರೀಕರಣಕ್ಕೆ ಮತ್ತಷ್ಟು ಒತ್ತು ಸಿಗಬೇಕು. ಅಧೀನ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಹುದ್ದೆಗಳು ಖಾಲಿಯಾಗುತ್ತಲೇ ಕಾಲಕಾಲಕ್ಕೆ ತುಂಬುವ ವ್ಯವಸ್ಥೆ ಆಗಬೇಕು. ಜಿಲ್ಲಾ ನ್ಯಾಯಾಧೀಶರ ಹುದ್ದೆ ಭರ್ತಿ ಪ್ರಕ್ರಿಯೆ ಹೈಕೋರ್ಟ್‌ಗೆ ದೊಡ್ಡ ತೊಡಕಾಗಿ ಪರಿಣಮಿಸಿದೆ. ಅರ್ಜಿ ಆಹ್ವಾನಿಸಿದರೂ ಅರ್ಹರು ಅಗತ್ಯಾನುಸಾರ ಸಿಗುತ್ತಿಲ್ಲ. ಈ ತೊಡಕು ನಿವಾರಣೆಗೆ ಮಾರ್ಗೋಪಾಯಗಳನ್ನು ಶೋಧಿಸಬೇಕಾದ ಅಗತ್ಯ ಇದೆ. 'ಕೋರ್ಟ್‌ಗೆ ಹೋಗಿ ಸೋತವನು ಸತ್ತ, ಗೆದ್ದವನು ಸೋತ' ಎಂಬ ಲೋಕೋಕ್ತಿ ಇದೆ. ಹಾಗಾಗದಂತೆ ನೋಡಿಕೊಳ್ಳಬೇಕಾದುದು ನ್ಯಾಯಾಂಗದ ಜವಾಬ್ದಾರಿ. ನಿಯಮಾನುಸಾರ ಸಿಗುವ ಗರಿಷ್ಠ ಶಿಕ್ಷಾವಧಿಯನ್ನು ಎಷ್ಟೋ ಮಂದಿ ವಿಚಾರಣಾಧೀನ ಹಂತದಲ್ಲೇ ಪೂರೈಸಿದ ನಿದರ್ಶನಗಳು ನಮ್ಮ ಮುಂದಿವೆ. ವ್ಯಕ್ತಿಗೆ ತ್ವರಿತವಾಗಿ ನ್ಯಾಯ ದೊರಕಿಸಿಕೊಡಬೇಕಾದುದು ನ್ಯಾಯಾಂಗದ ಹೊಣೆ. ಪ್ರಕರಣಗಳ ತ್ವರಿತ ವಿಲೇವಾರಿಗೆ ಬೇಕಿರುವ ಎಲ್ಲ ಬಗೆಯ ಮೂಲ ಸೌಕರ್ಯಗಳನ್ನು ನ್ಯಾಯಾಂಗಕ್ಕೆ ಒದಗಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯ. ಈ ಕರ್ತವ್ಯ ನಿರ್ವಹಣೆಯಲ್ಲಿ ಲೋಪ ಆಗಬಾರದು.

**■ ಎನ್. ಉದಯಕುಮಾರ್**

ನ್ಯಾಯದಾನದಲ್ಲಿ ವಿಳಂಬ ಸಲ್ಲದು. 'ಅತಿಯಾದ ವಿಳಂಬ, ನ್ಯಾಯ ನಿರಾಕರಣೆಗೆ ಸಮ' ಎಂಬ ಮಾತನ್ನು ಕಾನೂನು ಪಂಡಿತರಿಂದ ನ್ಯಾಯಾಧೀಶರವರೆಗೂ ಎಲ್ಲರೂ ಒಪ್ಪುತ್ತಾರೆ. ಆದರೆ ವಿಳಂಬ ತಪ್ಪಿಸಿ, ಬಾಕಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಸಾಧ್ಯವಾಗುತ್ತಿಲ್ಲ.



ಈಶ್ವರ್